ಮಾತುಕತೆ



**ರವಿಕುಮಾರ್ ನೀಹ**

ಚಿತ್ರಗಳು: ಚಂದನ್

# ‘ಹರಿಕಥೆ ಮುನ್ನಡೆಸಿತು, ಜನಕಥೆ ಬೆಳೆಸಿತು’

ಕನ್ನಡ ರಂಗಭೂಮಿ ಮತ್ತು ಹರಿಕಥಾ ಪ್ರಕಾರ ಕಂಡ ಅನನ್ಯ ಪ್ರತಿಭೆ ಲಕ್ಷ್ಮಣದಾಸ್; ದಮನಿತ ಸಮುದಾಯದ ಪ್ರತಿನಿಧಿಯಾಗಿ, ರಂಗಭೂಮಿಯ ದ್ರವ್ಯದೊಂದಿಗೆ ಹರಿಕಥಾ ಪ್ರಕಾರಕ್ಕೆ ಪ್ರವೇಶ ಪಡೆದವರು. ಪುರಾಣಕಥೆಗಳಿಗೆ ಮೀಸಲಾದ ಹರಿಕಥೆಯನ್ನು, ಜನಕಥೆಯನ್ನಾಗಿಸಿದ ಹಿರಿಮೆ ಇವರದು. ಪಂಪ, ರನ್ನರನ್ನು ಮಾತ್ರವಲ್ಲದೆ, ಅಂಬೇಡ್ಕರ್ ಅವರನ್ನೂ ಕೀರ್ತನ ಪ್ರಕಾರಕ್ಕೆ ಕರೆತಂದು ಜನಕಥಾಕೀರ್ತನದ ಹೊಸಹಾದಿಯನ್ನೇ ಸೃಷ್ಟಿಸಿದರು. ಸಾಧನೆಯ ಹಾದಿಯಲ್ಲಿ ಅನೇಕ ಸಂಕಷ್ಟಗಳನ್ನು ಎದುರಿಸಿದರೂ, ರಂಗಭೂಮಿ, ಸಂಗೀತ ಹಾಗೂ ಜನಕಥೆಯ ಮೂಲಕ ಕನ್ನಡ ಸಾಂಸ್ಕೃತಿಕ ಲೋಕದಲ್ಲಿ ತಮ್ಮದೇ ಆದ ಛಾಪು ಮೂಡಿಸಿದ ಸಾಧನೆ ಲಕ್ಷ್ಮಣದಾಸ್ ಅವರದು. ಅವರ ಬದುಕು ಹಾಗೂ ಸಾಧನೆ ಹೊಸ ತಲೆಮಾರಿನ ಸೃಜನಶೀಲರಿಗೆ ಪ್ರೇರಣೆಯ ಪಠ್ಯದಂತಿದೆ. ತುಮಕೂರು ಸೀಮೆಯ  ಕನ್ನಡದ ಈ ವಿಶಿಷ್ಟ ಕಲಾವಿದನೊಂದಿಗೆ ‘ಮಯೂರ’ಕ್ಕಾಗಿ ನಡೆಸಿದ ಮಾತುಕತೆಯ ಆಯ್ದ ಭಾಗ ಇಲ್ಲಿದೆ.